153ನೇಚಿ = (66)
4RK
050126

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎನ್.ರವಿಕುಮಾರ್, ಶ್ರೀ ಪಿ.ಹೆಚ್. ಪೂಜಾರ್ ಹಾಗೂ ಇತರರುಗಳು ನಿಯಮ – 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**ಸೂಚನೆ :**

ರಾಜ್ಯದ ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಹೈನುಗಾರಿಕೆ ಒಂದು ವರದಾನ. ಕರ್ನಾಟಕ ರಾಜ್ಯದಲ್ಲಿ ಪ್ರತಿದಿನ ಸರಾಸರಿ 1.8 ಕೋಟಿ ಲೀಟರ್‌ಗಳಷ್ಟು ಹಾಲು ಉತ್ಪಾದನೆ ಆಗುತ್ತಿದೆ. ಇದರಲ್ಲಿ ಶೇಕಡ 60 ರಷ್ಟು ಅಂದರೆ, 1 ಕೋಟಿ ಲೀಟರ್‌ಗಳಷ್ಟು ಹಾಲನ್ನು ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ಕೆ.ಎಂ.ಎಫ್ ತನ್ನ 15 ಹಾಲು ಉತ್ಪಾದಕರ ಒಕ್ಕೂಟಗಳಿಂದ ಶೇಖರಿಸುತ್ತಿದೆ. ರಾಜ್ಯದಲ್ಲಿರುವ 15 ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ರೂ.29/- ನೀಡುತ್ತಿವೆ ಹಾಗೂ ರಾಜ್ಯ ಸರ್ಕಾರ ಪ್ರೋತ್ಸಾಹ ಧನವಾಗಿ ಪ್ರತಿ ಲೀಟರ್‌ಗೆ ರೂ. 5 ನೀಡುತ್ತಿದೆ. ಆದರೆ, ರಾಜ್ಯ ಸರ್ಕಾರ ನೀಡುವ ಪ್ರೋತ್ಸಾಹ ಧನ 6 ತಿಂಗಳಿಂದ ಹಾಲು ಒಕ್ಕೂಟಗಳಿಗೆ ಬಿಡುಗಡೆಯಾಗಿಲ್ಲ. ಅಲ್ಲದೆ, ಹಾಲು ಒಕ್ಕೂಟಗಳು ಸ್ಯಾಚೇಟ್ ಮುಖೇನ ಮಾರಾಟ ಮಾಡುವ ಹಾಲಿನ ಪ್ರಮಾಣವನ್ನು 50 ಮಿ.ಲೀ ಗೆ ಹೆಚ್ಚಿಸಿರುವುದೊಂದಿಗೆ, ಹಾಲಿನ ದರವನ್ನು ರೂ.2/- ಗಳಿಗೆ ಹೆಚ್ಚಿಸಿರುವುದರಿಂದ ಗ್ರಾಹಕರು ಸಂಕಷ್ಟ ಪರಿಸ್ಥಿತಿಯಲ್ಲಿ ಸಿಲುಕಿದ್ದಾರೆ. ಅಲ್ಲದೆ, ಪಶು ಆಹಾರದ ದರ ಆಕಾಶಕ್ಕೆ ಏರಿದೆ. ಹಾಲು ಒಕ್ಕೂಟಗಳಿಗೆ ಸರಬರಾಜು ಮಾಡುವ ಪಶು ಆಹಾರವನ್ನು ಆಧರಿಸಿಯೇ, ಹಸುಗಳನ್ನು ಸಾಕಲು ರೈತರಿಗೆ ಸಾಧ್ಯವಾಗುತ್ತಿಲ್ಲ. ರಾಜ್ಯ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕ್ಷೀರಭಾಗ್ಯ ಯೋಜನೆಯಲ್ಲಿ ಅಕ್ರಮ ಮತ್ತು ಅವ್ಯವಹಾರಗಳು ನಡೆಯುತ್ತಿವೆ. ಈ ಮಧ್ಯೆ ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ಹಾಲು ಉತ್ಪಾದಕರಿಗೆ ನೀಡುವ ದರದಲ್ಲಿ ರೂ. 2/- ಕಡಿತ ಮಾಡಿ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿರುವ ಬಗ್ಗೆ.

**ಹೇಳಿಕೆ:**

ಕರ್ನಾಟಕ ಹಾಲು ಮಹಾಮಂಡಳದ ವ್ಯಾಪ್ತಿಯ 15 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 15,748 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ 8.61 ಲಕ್ಷ ಹಾಲು ಉತ್ಪಾದಕರಿಂದ ಪ್ರತಿ ದಿನ ಸರಾಸರಿ 89.17 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದ್ದು, ಹಾಲಿನ ಖರೀದಿ ದರ ಸರಾಸರಿ ಪ್ರತಿ ಲೀಟರ್‌ಗೆ ರೂ.31.73 ನೀಡಲಾಗುತ್ತಿದೆ. ರಾಜ್ಯ ಸರ್ಕಾರವು ಗುಣಮಟ್ಟದ ಪ್ರತಿ ಲೀಟರ್ ಹಾಲಿಗೆ ರೂ.5/-ಗಳ ಪ್ರೋತ್ಸಾಹಧನಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿನಲ್ಲಿ ಹಾಲು ಉತ್ಪಾದಕರಿಗೆ ಉತ್ತೇಜನದಡಿ ನಿಗಧಿಯಾದ ಅನುದಾನ ರೂ.1,300.00 ಕೋಟಿಗಳಲ್ಲಿ ಮೊದಲನೇ ಮತ್ತು ಎರಡನೇ ಕಂತಿನಲ್ಲಿ ರೂ.649.99 ಕೋಟಿಗಳು ಬಿಡುಗಡೆಯಾಗಿದ್ದು, ಅದರಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾಕರಿಗೆ 2023ನೇ ಸಾಲಿನ ಸೆಪ್ಟೆಂಬರ್-2023 ರಿಂದ ಡಿಸೆಂಬರ್-2023ರವರೆಗೆ ಹಾಗೂ 2024-25ನೇ ಸಾಲಿನ ಮಾರ್ಚ್-2024 ಮತ್ತು ಏಪ್ರಿಲ್-2024ರ ಮಾಹೆಗಳಿಗೆ ಒಟ್ಟು ರೂ.594.93 ಕೋಟಿಗಳ ಪ್ರೋತ್ಸಾಹಧನವನ್ನು ಪಾವತಿಸಲು ಕ್ರಮವಹಿಸಲಾಗಿರುತ್ತದೆ. ಬಾಕಿ ಉಳಿದಿರುವ 2023-24ನೇ ಸಾಲಿನ ಜನವರಿ-2024ರ ಮಾಹೆಯ ರೂ.46.70 ಕೋಟಿ ಫೆಬ್ರುವರಿ-2024ರ ರೂ.98.86 ಕೋಟಿ ಹಾಗೂ 2024-25ನೇ ಸಾಲಿನ ಮೇ-2024ರ ಮಾಹೆಯ ರೂ.106.97 ಕೋಟಿಗಳನ್ನು 3ನೇ ಕಂತಿನ ಅನುದಾನ ಬಿಡುಗಡೆ ಆದ ನಂತರ ಪಾವತಿಸಲು

....2

ಕ್ರಮವಹಿಸಲಾಗುವುದು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಲು ಉತ್ಪಾಕರಿಗೆ 2023-24ನೇ ಸಾಲಿನ ಎಲ್ಲಾ ಮಾಹೆಗಳಿಗೂ ಹಾಗೂ 2024-25ನೇ ಸಾಲಿನಲ್ಲಿ ಮೇ-2024ರ ಮಾಹೆಯವರೆಗೆ ಪ್ರೋತ್ಸಾಹಧನವನ್ನು ಪಾವತಿಸಲು ಕ್ರಮವಹಿಸಲಾಗಿದೆ.

ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಹಾಲು ಶೇಖರಣೆ ಹಿಂದಿನ ಸಾಲುಗಳಿಗೆ ಹೋಲಿಸಿದ್ದಲ್ಲಿ ಗಣನೀಯವಾಗಿ ಶೇ.9 ರಷ್ಟು ಹೆಚ್ಚಾಗಿರುವುದರಿಂದ ಸಕಾಲದಲ್ಲಿ ಸದಸ್ಯರಿಗೆ ಹಾಲಿನ ಬಟವಾಡೆ ಮಾಡಲು ಮತ್ತು ಹಾಲಿನ ಪರಿವರ್ತನೆಗೆ ಹೆಚ್ಚು ವ್ಯಯವಾಗುವುದರಿಂದ ತಾತ್ಕಾಲಿಕವಾಗಿ ಗ್ರಾಹಕರಿಗೆ 50 ಎಂ.ಎಲ್. ಹೆಚ್ಚಿಗೆ ನೀಡುವುದರಿಂದ ಹಾಲಿನ ಮಾರಾಟ ದರವನ್ನು ಹೆಚ್ಚಿಸದೇ ದಿನಾಂಕ:26.06.2024 ರಿಂದ ಪ್ರತಿ ಲೀಟರ್ ಹಾಲಿಗೆ 50 ಎಂ.ಎಲ್ ಸೇರಿಸಿ ತಗಲುವ ವೆಚ್ಚವನ್ನಾದರಿಸಿ ಮಾರಾಟ ಮಾಡಲಾಗುತ್ತಿದೆ. ಒಕ್ಕೂಟಗಳ ಬೇಡಿಕೆ ಅನುಸಾರ ಸರಳ ಸೂತ್ರೀಕರಣದನ್ವಯ ಪಶು ಆಹಾರವನ್ನು ಕರ್ನಾಟಕ ಹಾಲು ಮಹಾಮಂಡಳದ ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸರಬರಾಜು ಮಾಡಲಾಗುತ್ತಿದೆ. ಪಶು ಆಹಾರ ಉತ್ಪಾದನೆಗೆ ಬಳಸುವ ಕಚ್ಚಾಪದಾರ್ಥಗಳ ಬೆಲೆಗಳನ್ನಾಧರಿಸಿ ಕಹಾಮದ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ದರ ನಿಗದಿಪಡಿಸಲಾಗಿರುತ್ತದೆ. ಕ್ಷೀರಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಬೇಡಿಕೆ ಅನುಸಾರ ಹಾಲಿನ ಪುಡಿಯನ್ನು ಜಿಲ್ಲೆಗಳ ಮುಖಾಂತರ ನಿರ್ದೇಶಕರು ಪಿ.ಎಂ.ಪೋಷಣ್ (ಮಧ್ಯಾಹ್ನದ ಉಪಾಹಾರ ಯೋಜನೆ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಶಾಲೆಗಳಿಗೆ ಮತ್ತು ತಾಲ್ಲೂಕು ಶಿಶು ಯೋಜನಾಭಿವೃದ್ಧಿ ಇಲಾಖಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಅಂಗನವಾಡಿಗಳಿಗೆ ವಿತರಣೆ ಮಾಡಲಾಗುತ್ತಿದೆ.

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದ ಹಾಲು ಶೇಖರಣೆ ಹೆಚ್ಚಾಗಿರುವುದರಿಂದ ಒಕ್ಕೂಟದ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ ಒಕ್ಕೂಟವು ದಿನಾಂಕ:05.07.2024 ರಿಂದ ಹಾಲಿನ ಖರೀದಿ ದರ ರೂ.2/- ಗಳನ್ನು ಕಡಿತ ಮಾಡಲಾಗಿರುತ್ತದೆ. ಖರೀದಿ ದರವು ತಾತ್ಕಾಲಿಕವಾಗಿದ್ದು, ಮುಂದಿನ ದಿನಗಳಲ್ಲಿ ಒಕ್ಕೂಟದ ಆರ್ಥಿಕ ಪರಿಸ್ಥಿತಿಯನ್ನಾಧರಿಸಿ ಖರೀದಿ ದರವನ್ನು ಪರಿಷ್ಕರಿಸಲಾಗುವುದು.

**ಇ- ಪಸಂಮೀ 135 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**